ಭೂಸ್ವಾಧೀನ ಕಾನೂನಿನಿಂದ ಬಡವರಿಗೆ ಅನ್ಯಾಯ

3602 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾಮಾಜಿಕ ಬಳಕೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಪ್ರಚಲಿತ ಕಾನೂನುಗಳಿಂದ ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯವಾಗುತ್ತಿಲ್ಲವೇ?

ಆ) ಹಾಗಿದ್ದಲ್ಲಿ ಪರಿಹಾರ ಧನ ಕೊಟ್ಟ ನಂತರವೇ ಭೂಸ್ವಾಧೀನ ಮಾಡಲು ಕಾನೂನು ತಿದ್ದುಪಡಿ ಮಾಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಖಾಸಗಿ ವರ್ತಕರ ಹತ್ತಿರ ರಸಗೊಬ್ಬರಗಳ ದಾಸ್ತಾನು

3603 - ಶ್ರೀ ಬಾಬುಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ದಿನಾಂಕ 24-7-1991ರಂದು ಖಾಸಗಿ ವರ್ತಕರ ಹತ್ತಿರ ರಸಗೊಬ್ಬರಗಳ ದಾಸ್ತಾನು ಎಷ್ಟಿತ್ತು?

ಆ) ರಾಜ್ಯದಲ್ಲಿರುವ ರಸಗೊಬ್ಬರಗಳ ವ್ಯಾಪಾರಿಗಳ ಹತ್ತಿರ ದಿನಾಂಕ 12-8-91ರಂದು ಇದ್ದ ದಾಸ್ತಾನು ಎಷ್ಟು?

ಇ) ಈ ಮಧ್ಯಂತರ ಅವಧಿಯಲ್ಲಿ ಮಾರಾಟವಾದ ರಸಗೊಬ್ಬರ ಕಳ್ಳ ವ್ಯಾಪಾರದಿಂದ ನಡೆಯುತ್ತದೆಂದು ಗೊತ್ತಾದ ಸರ್ಕಾರ 24-9-91ರಂದೇ ದಾಸ್ತಾನು ಸೀಜ್ ಮಾಡಿ ಕಾಳ ಬಜಾರ್ ನಡೆಯದಂತೆ ಮಾಡಲಿಲ್ಲವೇಕೆ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):

ಅ) ದಿನಾಂಕ 24-7-91ರಂದು ರಾಜ್ಯದ ಖಾಸಗಿ ರಸಗೊಬ್ಬರಗಳ ಮಾರಾಟಗಾರರ ಬಳಿ 80371 ಟನ್ ರಸಗೊಬ್ಬರಗಳ ದಾಸ್ತಾನು ಇತ್ತು.

ಆ) ದಿನಾಂಕ 24-7-91ರಂದು ಖಾಸಗಿ ರಸಗೊಬ್ಬರಗಳ ಮಾರಾಟಗಾರರ ಹತ್ತಿರ ಚಿಲ್ಲರೆ ದಾಸ್ತಾನು 68339 ಟನ್ ಮತ್ತು ಸಗಟು ದಾಸ್ತಾನು 12032 ಟನ್ ಅಂದರೆ ಒಟ್ಟು 80371 ಟನ್ ದಾಸ್ತಾನನ್ನು ಗುರುತಿಸಲಾಗಿತ್ತು. ಇದರಲ್ಲಿ ಚಿಲ್ಲರೆ ದಾಸ್ತಾನನ್ನು ಹಳೆಯ ದರದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಮತ್ತು ದಿನಾಂಕ 12-8-91ರಂದೂ ಸಹ ಮಾರಾಟ ಮುಂದುವರೆದಿತ್ತು. ಆದ್ದರಿಂದ 12-8-91ರಂದು ಇದ್ದ ನಿರ್ದಿಷ್ಟವಾದ ದಾಸ್ತಾನಿನ ವಿವರ ಲಭ್ಯವಿರುವುದಿಲ್ಲ. ಆದರೆ ಸಗಟು ದಾಸ್ತಾನು 12032 ಟನ್ ಇನ್ನೂ ಮಾರಾಟವಾಗಿರದೆ ದಾಸ್ತಾನಿತ್ತು.

ಇ) ದಿನಾಂಕ 24-7-91ರಂದು ರಸಗೊಬ್ಬರ ಮಾರಾಟಗಾರರಲ್ಲಿದ್ದ ದಾಸ್ತಾನನ್ನು ಗುರುತಿಸಿ ಎಲ್ಲಾ ದಾಸ್ತಾನನ್ನು ಹಳೆಯ ಬೆಲೆಗೆ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿತ್ತು. ಈ ಮಧ್ಯಂತರ ಅವಧಿಯಲ್ಲಿ ರಸಗೊಬ್ಬರಗಳು ಕಾಳಸಂತೆಯಲ್ಲಿ ಮಾರಾಟವಾಗದಂತೆ ವ್ಯವಸ್ಥೆ ಮಾಡಲಾಗಿತ್ತು.